

ರೋಮಾಂಚನಗೊಂಡಿದ್ದಾನೆ ಸೂರ್ಯ
ನನ್ನ ಮೈಯ ತಾಕಿದ ಕಿರಣಗಳಿಂದ
ಉಲ್ಲಾಸಗೊಂಡಿದ್ದೇನೆ ನಾನು ಕೂಡ
ಉರುಳು ಹಾಕಿದ್ದಾರಂತೆ ಗಾಳಿಗೆ
ನೀರಿನ ಕಣ್ಣು ಕಿತ್ತು
ನರರ ನೆತ್ತರಲ್ಲಿ ತೊಳೆಯುತ್ತಿದ್ದಾರೆ.

ಭೂಮಿಯನ್ನು ಒದ್ದ ಕಾಲಿಗೆ ಪಾದಪೂಜೆಯಂತೆ
ದೇವರ ಬಾಯಿ ಕಿತ್ತು ಧರ್ಮದ ತಲೆಗೆ ಕಟ್ಟಿದ್ದಾರೆ
ತಾಳಲಾರದೆ ಭಾರ ನೆಲ ಉಸಿರುಗಟ್ಟಿ ಬೆವರುತ್ತಿದೆ
ಬಿಡುಗಡೆಗೊಳಿಸಿ ಈ ಜೀವವನ್ನು

ಬೆಳಕು ಮೈಲಿಗೆಯಾಗಿದೆಯೆಂದು
ಓಡುತ್ತಿದ್ದಾರೆ ಕತ್ತಲೆಯ ಕಡೆಗೆ
ಯಾರು ತಡೆದು ನಿಲ್ಲಿಸುತ್ತಾರೆ
ಸ್ಥಗಿತ ಮೆದುಳ ಮೂಢರನ್ನ...

ಕುರುಡ ನಾನು
ರಸ್ತೆಯ ಆ ಬದಿಗೆ ದಾಟಲು
ಕಣ್ಣುಗಳ ಕೇಳುತ್ತಿದ್ದೇನೆ
ನನ್ನ ಮುಟ್ಟುವ
ಯಾರ ಕೈಗಳಲ್ಲಾದರೂ ಕಣ್ಣುಗಳಿವೆಯಾ...

